**ಸಾಕ್ಷಿಯನ್ನು ಪುನಃ ದಿನಾಂಕ 22.02.2023 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ ಎಲ್ ಎಸ್ ಕೆ ವಕೀಲರಿಂದಃ**

ನಾನು 1 ನೇ ಆರೋಪಿಯ ಜೂತೆ ಈ ಪ್ರಕರಣದಲ್ಲಿ ದೂರನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಮತ್ತು ತದನಂತರವೂ ಕೂಡ ಮಾತುಕತೆ ಮಾಡುತ್ತಿದ್ದೆನು ಎಂದರೆ ನನ್ನ ಸ್ವಇಚ್ಚೆಯಿಂದ ಮಾತುಕತೆ ಮಾಡುತ್ತಿರಲಿಲ್ಲ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಅವರಿಗೆ ಮಾತನಾಡಲು ಒತ್ತಾಯ ಮಾಡುತ್ತಿದ್ದುದರಿಂದ ಅವರು ಮಾತನಾಡಿರುತ್ತಾರೆಂದು ನುಡಿಯುತ್ತಾರೆ.) ನಾನು 1 ನೇ ಆರೋಪಿಯ ಜೂತೆ ಹಲವು ಬಾರಿ ಹಲವು ನಿಮಿಷಗಟ್ಟಲೆ, ಕೆಲವೊಮ್ಮೆ ಅರ್ದಗಂಟೆ ಮತ್ತು ಕೆಲವೊಮ್ಮೆ ಒಂದು ಗಂಟೆವರೆಗೆ ಮಾತನಾಡಿರುತ್ತೇನೆ ಎಂದರೆ ನನ್ನ ಸ್ವಇಚ್ಚೆಯಿಂದ ಮಾತನಾಡಿರುವುದಿಲ್ಲ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಅವರಿಗೆ ಮಾತನಾಡಲು ಒತ್ತಾಯ ಮತ್ತು ಬೆದರಿಕೆ ಹಾಕಿದ್ದರಿಂದ ಅವರು ಮಾತನಾಡಿರುತ್ತಾರೆಂದು ನುಡಿಯುತ್ತಾರೆ.) ನಾನು 1 ನೇ ಆರೋಪಿಯ ಜೊತೆ ಮದ್ಯರಾತ್ರಿಯಲ್ಲಿಯೂ ಕೂಡ ಫೋನಿನಲ್ಲಿ ಮಾತನಾಡಿರುತ್ತೇನೆ ಎಂದರೆ ಆ ರೀತಿ ನನಗೆ ಮದ್ಯರಾತ್ರಿ ಮತ್ತು ಮದ್ಯರಾತ್ರಿ ತದನಂತರವೂ ಕೂಡ 1 ನೇ ಆರೋಪಿ ಅವರ ಫೋನ್ ಕರೆಯನ್ನು ಸ್ವೀಕರಿಸಿ ನನಗೆ ಅವರ ಜೊತೆ ಮಾತನಾಡುವಂತೆ ಒತ್ತಾಯ ಪಡಿಸಿದ್ದರಿಂದ ಆ ರೀತಿ ನಾನು ಮಾತನಾಡಿರುತ್ತೇನೆ. ನಾನು ನನ್ನ ಫೋನ್ ಮೂಲಕ ಕೂಡ 1 ನೇ ಆರೋಪಿಗೆ ಫೋನ್ ಕರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಫೋನ್ ಕರೆ ಮಾಡಿದ್ದಾಗ ಅವರ ಜೊತೆ ಮಾತನಾಡಲು ನನಗೆ ಇಷ್ಟ ಇಲ್ಲದಿದ್ದರೆ ಅವರ ಫೋನ್ ಕರೆಯನ್ನು ನಾನು ಸ್ವೀಕರಿಸದೆ ಅದನ್ನು ಕಟ್ ಮಾಡಬಹುದಾಗಿತ್ತು ಎಂದರೆ ಆ ರೀತಿ ನಾನು ಹಲವು ಬಾರಿ 1 ನೇ ಆರೋಪಿಯು ನನಗೆ ಫೋನ್ ಕರೆ ಮಾಡಿದ್ದಾಗ ಅವರ ಫೋನ್ ಕರೆಯನ್ನು ನಾನು ಸ್ವೀಕರಿಸುವುದಿಲ್ಲ ಅದನ್ನು ಕಟ್ ಮಾಡಿರುತ್ತೇನೆ. ಯಾರಾದರೂ ನನಗೆ ಫೋನ್ ಕರೆ ಮಾಡಿ ಮಾನಸಿಕ ಯಾತನೆ ನೀಡಿದ್ದಲ್ಲಿ ಅವರ ವಿರುದ್ದ ತಕ್ಷಣಕ್ಕೆ ಅಂದರೆ ಒಂದು, ಎರಡು ಅಥವಾ ಮೂರು ದಿನಗಳಲ್ಲಿ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳ ಬಹುದು ಎಂದು ನನಗೆ ಗೊತ್ತಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ನನಗೆ ಫೋನ್ ಕರೆ

ಮಾಡಿದ ಕೂಡಲೆ ನಾನು ಆ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿರುವುದಿಲ್ಲ ಎಂದರೆ ಆ ಬಗ್ಗೆ ನಾನು 1 ನೇ ಆರೋಪಿಯ ಕುಟುಂಬದ ಸದಸ್ಯರಿಗೆ 1 ನೇ ಆರೋಪಿಯ ಬಗ್ಗೆ ದೂರನ್ನು ಹೇಳಿರುತ್ತೇನೆ. ಕೋವಿಡ್-19 ರ ಪ್ಯಾಂಡಮಿಕ್ ಸಂದರ್ಬದಲ್ಲಿ ನಾನು 1 ನೇ ಆರೋಪಿಗೆ ಕೋವಿಡ್ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಿ ಇಲ್ಲವಾದಲ್ಲಿ ತೊಂದರೆಯಾಗುತ್ತದೆ ಎಂದು ಮೆಸೆಜ್ ಮಾಡಿರುತ್ತೇನೆ ಹಾಗೂ ಫೋನ್ ನಲ್ಲಿ ಮಾತನಾಡಿ ಹೇಳಿರುತ್ತೇನೆ ಎಂದರೆ ನಾನು ಈ ಪ್ರಶ್ನೆಗೆ ಈಗ ಉತ್ತರಿಸುವುದಿಲ್ಲ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು 1 ನೇ ಆರೋಪಿಯ ವಿರುದ್ಧ ಇನ್ನು ಎರಡು ಎಫ್ಐಆರ್ ಗಳನ್ನು ದಾಖಲು ಮಾಡಿದ್ದು ಆ ರೀತಿ ನಾನು 1 ನೇ ಆರೋಪಿಯ ವಿರುದ್ಧ 3 ನೇ ಎಫ್ಐಆರ್ ದಾಖಲು ಮಾಡಿರುವ ಕೇಸಿನಲ್ಲಿ ಈ ಪ್ರಶ್ನೆಯನ್ನು ಅವರಿಗೆ ಕೇಳಬೇಕೆಂದು ಸಾಕ್ಷಿಯು ನುಡಿಯುತ್ತಾರೆ.) 1 ನೇ ಆರೋಪಿ ನನಗೆ ಕರೆ ಮಾಡಿದಾಗ ನಾನು 1 ನೇ ಆರೋಪಿಯ ಜೊತೆ ಯಾವಾಗಲೂ ಒಳ್ಳೆಯ ಬಾಂದವ್ಯದಿಂದ ಮತ್ತು ಸಂಬಂದದಿಂದ ಮಾತುಕತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. (ನ್ಯಾಯಾಲಯದ ಟಿಪ್ಪಣಿ ಃ ಸಾಕ್ಷಿಯು ಮುಂದುವರೆದು ಅವರು 1 ನೇ ಆರೋಪಿಯ ಮತ್ತು ಅವರ ಕುಟುಂಬದವರ ನಿರಂತರ ಒತ್ತಾಯ, ಬೆದರಿಕೆ ಮತ್ತು ಹಲ್ಲೆಗೆ ಒಳಗಾಗಿ 1 ನೇ ಆರೋಪಿಯ ಜೊತೆ ಅವರು ಮಾತನಾಡಿರುತ್ತಾರೆ ವಿನಃ ತಾವಾಗಿಯೇ 1 ನೇ ಆರೋಪಿ ಜೊತೆ ಮಾತನಾಡಿರುವುದಿಲ್ಲ ಮತ್ತು ಅವರಿಗೆ ಫೋನ್ ಕರೆ ಮಾಡಿರುವುದಿಲ್ಲವೆಂದು ನುಡಿಯುತ್ತಾರೆ.)

(ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಗಿರುತ್ತದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸ. ಇ. ಎ. ಒ.

6 ನೇ ಅ ಮು ಮ ದಂ ನ್ಯಾ